ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

(ಪೊಲೀಸ್ ಇಲಾಖೆಯ ಅಧಿಸೂಚನೆ ಸಂಖ್ಯೆ: 08/ನೇಮಕಾತಿ-2/2021-22 ದಿನಾಂಕ 03-03-2021)

**ಪಿಎಸ್ಐ ನೇಮಕಾತಿ ಪರೀಕ್ಷೆಯನ್ನು ನಡೆಸಲು ವೇಳಾಪಟ್ಟಿ ಮತ್ತು ಬೆಲ್ ಸಮಯಗಳನ್ನು ಈ ಕೆಳಗೆ ನೀಡಲಾಗಿದೆ.**

## ಪತ್ರಿಕೆ-1 ರ ಪರೀಕ್ಷಾ ವೇಳಾಪಟ್ಟಿ

| ದಿನಾಂಕ: ದಿನ: | ಸಮಯ : | ವಿಷಯ : | ಅಂಕಗಳು: | ಪ್ರಶ್ನೆ ಪತ್ರಿಕೆಯ ಸಮೇತ ಇರುವ ಉತ್ತರ ಪತ್ರಿಕೆ. (ವಿವರಣಾತ್ಮಕ ಮಾದರಿ) |
|---|---|---|---|---|
| 03-10-2024 ಗುರುವಾರ | ಬೆಳಿಗ್ಗೆ 10.30 ರಿಂದ ಮ. 12.00 | Paper-1 | 50 | |

## ಪರೀಕ್ಷೆಯ ಬೆಲ್ ಸಮಯ ಮತ್ತು ವಿವರಗಳು

ಈ ಬೆಲ್ ಸಮಯವನ್ನು ಯಾವುದೇ ಬದಲಾವಣೆ ಮಾಡದೆ ಅಥವಾ ದೂರು ಬರದಂತೆ ನಿಖರವಾಗಿ ಅನುಸರಿಸಲು ಸೂಚಿಸಿದೆ.

ಸೂಚನೆ: ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳನ್ನು (Frisking) ತಪಾಸಣೆಗೆ ಒಳಪಡಿಸುವ ಹಿನ್ನಲೆಯಲ್ಲಿ, ಅಭ್ಯರ್ಥಿಗಳು ಕನಿಷ್ಠ ಎರಡು ಗಂಟೆಯ ಮೊದಲು ಕೇಂದ್ರದಲ್ಲಿ ಹಾಜರಿರಲು ಸೂಚಿಸಿದೆ ಮತ್ತು ಬೆ. 9.45ರ ನಂತರ ಪರೀಕ್ಷಾ ಕೇಂದ್ರದ ಆವರಣವನ್ನು ಪ್ರವೇಶಿಸಲು ಅನುಮತಿಸುವುದಿಲ್ಲ. ಮೊದಲನೇ ಪತ್ರಿಕೆಯ ನಂತರ ಎರಡನೇ ಪತ್ರಿಕೆ ಪ್ರಾರಂಭವಾಗುವ ಮೊದಲು ಇರುವ ಮೂವತ್ತು ನಿಮಿಷಗಳ ಕಾಲಾವಕಾಶದಲ್ಲಿ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರದಿಂದ ಹೊರಗೆ ಹೋಗಲು ಅನುಮತಿಸುವುದಿಲ್ಲ. ಅಭ್ಯರ್ಥಿಗಳು ತಮ್ಮೊಡನೆ ವೈದ್ಯಕೀಯ ಔಷಧಿಗಳನ್ನು / ಮಾತ್ರೆಗಳನ್ನು ತೆಗೆದುಕೊಂಡು ಹೋಗಬಹುದು. ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

| ಕ್ರ ಸಂ | ಬೆಲ್ ಸಂಖ್ಯೆ | ಬೆಳಗಿನ ಅವಧಿ | ವಿವರಗಳು |
|---|---|---|---|
| 01 | ಮೊದಲನೇ ಬೆಲ್ | ಬೆ. 10.00 | • ಪ್ರವೇಶ ಪತ್ರವನ್ನು ಮತ್ತು ಗುರುತಿನ ಚೀಟಿ ತೋರಿಸಿದ ಅಭ್ಯರ್ಥಿಗಳಿಗೆ ಪರೀಕ್ಷೆಯ ಕೊಠಡಿಯನ್ನು ಪ್ರವೇಶಿಸಿ ನಿಗದಿತ ಆಸನದಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.<br>• ಕೊಠಡಿ ಮೇಲ್ವಿಚಾರಕರು ಪ್ರವೇಶ ಪತ್ರದಲ್ಲಿರುವ ಭಾವಚಿತ್ರವನ್ನು ಮತ್ತು ಗುರುತಿನ ಚೀಟಿಯಲ್ಲಿ ಮುದ್ರಿತವಾಗಿರುವ ಭಾವಚಿತ್ರವನ್ನು ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯೊಂದಿಗೆ ಪರಿಶೀಲಿಸುತ್ತಾರೆ ಮತ್ತು ಪ್ರವೇಶ ಪತ್ರದಲ್ಲಿ ಸಹಿ ಮಾಡುತ್ತಾರೆ. |
| 02 | ಎರಡನೇ ಬೆಲ್ | ಬೆ. 10.15 | • ಬೆ. 10.20 ಕ್ಕೆ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು/ಪ್ರಶ್ನೆ ಪತ್ರಿಕಾ ಪಾಲಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆಯ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರುಗಳಿಗೆ ಅವರುಗಳ ಕೊಠಡಿಗೆ ತಂದು ಕೊಡುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆಯ ಯನ್ನು ಅಭ್ಯರ್ಥಿಗಳಿಗೆ ತೋರಿಸಿ ಈ ರೀತಿ ಜೋರಾಗಿ ಹೇಳಬೇಕು. "ಪ್ರಶ್ನೆ ಪತ್ರಿಕೆಗಳನ್ನು ಸೀಲ್ ಮಾಡಿರುವ ಲಕೋಟೆಯಲ್ಲಿ ಇಡಲಾಗಿದೆ ಮತ್ತು ಲಕೋಟೆಯು ಒಡೆದಿರುವುದಿಲ್ಲ". ಎಂದು ತೋರಿಸುತ್ತಾರೆ.<br>**ವಿ.ಸೂ.:** ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯ ಲಕೋಟೆಯನ್ನು ತೆರೆಯಲು (Question Paper cum Answer Sheet Booklet) ಕೊಠಡಿ ಮೇಲ್ವಿಚಾರಕರು ಮಾತ್ರ ಅಧಿಕಾರವನ್ನು ಹೊಂದಿರುತ್ತಾರೆ. ಕೊಠಡಿ ಮೇಲ್ವಿಚಾರಕರನ್ನು ಹೊರತುಪಡಿಸಿ ಬೇರೆ ಅಧಿಕಾರಿ / ಸಿಬ್ಬಂದಿ ವರ್ಗ/ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು / ಅಧ್ಯಕ್ಷರು / ಕಾರ್ಯದರ್ಶಿ / ಆಡಳಿತಾಧಿಕಾರಿ ಮುಂತಾದವರುಗಳು ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಅಧಿಕಾರವನ್ನು ಹೊಂದಿರುವುದಿಲ್ಲ.<br>• ಬೆ. 10.25 ಕ್ಕೆ ಅಭ್ಯರ್ಥಿಗಳಿಗೆ (Question Paper cum Answer Sheet Booklet) ಪ್ರಶ್ನೆ ಪತ್ರಿಕೆ ಸಮೇತ ಉತ್ತರ ಪತ್ರಿಕೆಯನ್ನು ಹೊಂದಿರುವ ಲಕೋಟೆಯನ್ನು ಸೂಕ್ತ ರೀತಿಯಲ್ಲಿ ವಿತರಿಸುತ್ತಾರೆ.<br>• ಅಭ್ಯರ್ಥಿಗಳು ಸದರಿ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ಬರೆಯಬೇಕು. ನಂತರ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆಯಲ್ಲಿ ಎಚ್ಚರದಿಂದ ನೊಂದಣಿ ಸಂಖ್ಯೆ, ಕೇಂದ್ರ ಸಂಖ್ಯೆ, ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ಗಳನ್ನು ಬರೆದು ಸಂಬಂಧಿಸಿದ ವೃತ್ತಗಳನ್ನು ತಪ್ಪದೇ ತುಂಬಬೇಕು.<br>• ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕ್ರಮ ಸಂಖ್ಯೆಯನ್ನು / ವರ್ಷನ್ ಕೋಡ್ ಅನ್ನು ನಾಮಿನಲ್ ರೋಲ್‌ನಲ್ಲಿ ಬರೆಯಬೇಕು. ನಂತರ ಉತ್ತರ ಪತ್ರಿಕೆಯ ನಿಗದಿತ ಜಾಗದಲ್ಲಿ ಸಹಿಯನ್ನೂ ಮಾಡಬೇಕು.<br>• ಮೂರನೇ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕಿರುಪುಸ್ತಕವನ್ನು ನೋಡಲು ಅಥವಾ ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದಕ್ಕೆ ಅವಕಾಶ ಕೊಡಲಾಗುವುದಿಲ್ಲ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಸಹಿಯನ್ನು ನಾಮಿನಲ್ ರೋಲ್ ನಲ್ಲಿ ಪಡೆದು ಮುದ್ರಿತವಾಗಿರುವ ಸಹಿಯನ್ನು ತಾಳೆ ಮಾಡುತ್ತಾರೆ. |
| 03 | ಮೂರನೇ ಬೆಲ್ | ಬೆ. 10.30 | • ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಸಮೇತ ಇರುವ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಅವಕಾಶ ಕೊಡಲಾಗುವುದು.<br>• ಈ ಬೆಲ್ ಅಂದರೆ ಬೆ. 10.30 ಆದ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಅಥವಾ ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶವಿರುವುದಿಲ್ಲ. |
| 04 | ನಾಲ್ಕನೇ ಬೆಲ್ | ಬೆ. 11.30 | • ಇದು ಮೊದಲನೆಯ ಎಚ್ಚರಿಕೆ ಬೆಲ್ – ಪರೀಕ್ಷೆಯ ಒಂದು ಗಂಟೆಯ ಅವಧಿ ಮುಗಿದಿರುವುದಕ್ಕಾಗಿ. |
| 05 | ಐದನೇ ಬೆಲ್ | ಬೆ. 11.45 | • ಇದು ಎರಡನೆಯ ಎಚ್ಚರಿಕೆ ಬೆಲ್ – ಪರೀಕ್ಷೆ ಮುಗಿಯಲು ಹದಿನೈದು ನಿಮಿಷಗಳು ಬಾಕಿ ಉಳಿದಿರುವ ಬಗ್ಗೆ |
| 06 | ಆರನೆಯ ಬೆಲ್ | ಬೆ. 11.55 | • ಇದು ಕೊನೆಯ ಎಚ್ಚರಿಕೆಯ ಬೆಲ್ – ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಪರೀಕ್ಷೆ ಮುಗಿಯಲು ಕೇವಲ ಐದು ನಿಮಿಷಗಳು ಬಾಕಿ ಉಳಿದಿವೆ ಎಂದು ತಿಳಿಸುತ್ತಾರೆ. |
| 07 | ಏಳನೆಯ ಹಾಗೂ ಕೊನೆಯ ಬೆಲ್ | ಅಪರಾಹ್ನ 12.00 | • ಪರೀಕ್ಷೆ ಮುಕ್ತಾಯ. ಅಭ್ಯರ್ಥಿಗಳು ಉತ್ತರಿಸುವುದನ್ನು ನಿಲ್ಲಿಸುವುದು.<br>• ಈ ಬೆಲ್ ಆದ ತಕ್ಷಣ ಕೊಠಡಿ ಮೇಲ್ವಿಚಾರಕರು ಎಲ್ಲಾ ಅಭ್ಯರ್ಥಿಗಳು ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದನ್ನು ನಿಲ್ಲಿಸಿದ್ದಾರೆ ಎಂದು ಖಾತ್ರಿಮಾಡಿಕೊಳ್ಳಬೇಕು. ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಉತ್ತರ ಪತ್ರಿಕೆಯಲ್ಲಿ ತಮ್ಮ ಸಹಿ ಮಾಡಲು ಸೂಚಿಸಬೇಕು.<br>• ಅಭ್ಯರ್ಥಿಗಳು **"ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆ"** ಯನ್ನು ಯಥಾಸ್ಥಿತಿಯಲ್ಲಿ ಕೊಠಡಿ ಮೇಲ್ವಿಚಾರಕರಿಗೆ ನೀಡುವ ಮೊದಲು ತಮ್ಮ ಸಹಿ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಿ, ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಂದ **"ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆ"** ಪಡೆಯುವುದು.<br>ಗಮನಿಸಿ: ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗುವುದಕ್ಕೆ ಮೊದಲು **"ಪ್ರಶ್ನೆ ಪತ್ರಿಕೆ ಸಮೇತ ಇರುವ ಉತ್ತರ ಪತ್ರಿಕೆ"** ಯನ್ನು ಅಭ್ಯರ್ಥಿಗಳಿಂದ ಪಡೆಯಲಾಗಿದೆಯೇ ಎಂದು ಕೊಠಡಿ ಮೇಲ್ವಿಚಾರಕರು ಖಾತ್ರಿ ಮಾಡಿಕೊಳ್ಳಬೇಕು. |

ಗಮನಿಸಿ: ಪರೀಕ್ಷಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳು ನೀಡುವ ಎಲ್ಲಾ ಸೂಚನೆಗಳನ್ನು ಅಭ್ಯರ್ಥಿಗಳು ತಪ್ಪದೇ ಪಾಲಿಸಬೇಕು. ಸೂಚನೆಗಳನ್ನು ಪಾಲಿಸದೇ ಇರುವ ಅಭ್ಯರ್ಥಿಗಳನ್ನು ದುಷ್ಕೃತ್ಯದ ವಿಧಾನವೆಂದು ಪರಿಗಣಿಸಲಾಗುವುದು; ಹಾಗು ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಈ ಕೆಳಕಂಡ ರೀತಿಯ ತಪ್ಪುಗಳನ್ನು ಎಸಗಿದಲ್ಲಿ; ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತು ಕ್ರಮ / ಅಪರಾಧ ಮೊಕದ್ದಮೆಯನ್ನು ಹೂಡಲಾಗುವುದು: ಗಲಾಟೆ ಮಾಡಿದರೆ / ನಿಶ್ಯಬ್ಧತೆಯನ್ನು ಕಾಪಾಡದಿದ್ದರೆ; ಪರೀಕ್ಷಾ ಸಮಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಪುಸ್ತಕ, ಚೀಟಿ ಇತ್ಯಾದಿಗಳನ್ನು ಬಳಸಿದರೆ; ಬೇರೆ ಅಭ್ಯರ್ಥಿಗಳ ಜೊತೆ ಮಾತನಾಡುವುದು ಅಥವಾ ಸಂಜ್ಞೆ ಮಾಡುವುದು; ಅಭ್ಯರ್ಥಿಯು ಬೇರೆ ಅಭ್ಯರ್ಥಿಗಳ ಉತ್ತರ ಪತ್ರಿಕೆಯಿಂದ ಅಥವಾ ಇನ್ನಾವುದೇ ಮೂಲಗಳಿಂದ ನಕಲು ಮಾಡುತ್ತಿದ್ದರೆ; ಅಭ್ಯರ್ಥಿಯು ತನ್ನ ಉತ್ತರ ಪತ್ರಿಕೆ ಬೇರೆ ಕಡೆ ವರ್ಗಾಯಿಸಿದರೆ; ಬದಲಿ ಅಭ್ಯರ್ಥಿಯಾಗಿದ್ದರೆ; ಪರೀಕ್ಷಾ ಅವಧಿಯಲ್ಲಿ ಅಥವಾ ಪರೀಕ್ಷೆಯ ನಂತರ ಉತ್ತರ ಪತ್ರಿಕೆಯನ್ನು ಪರೀಕ್ಷಾ ಕೊಠಡಿಯಿಂದ ಹೊರಗಡೆ ತೆಗೆದುಕೊಂಡು ಹೋದಲ್ಲಿ; ಉತ್ತರ ಪತ್ರಿಕೆಯನ್ನು ಹರಿದು ಹಾಕುವುದು ಅಥವಾ ಇನ್ನಾವುದೇ ಪರೀಕ್ಷಾ ಅವ್ಯವಹಾರಗಳು ಕಂಡು ಬಂದಲ್ಲಿ.

ಸಹಿ/-ಕಾರ್ಯನಿರ್ವಾಹಕ ನಿರ್ದೇಶಕರು